O.S.No. 153/2019 PW - 1

ದಿನಾಂಕ 26.02.2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು ಃ ಪ್ರತಿವಾದಿ ಪರ ಶ್ರೀ ಸಿಎಂಜೆ ವಕೀಲರಿಂದ ಃ**

ನನ್ನ ದಾವಾ ಸ್ವತ್ತನ್ನು ಪ್ರತಿವಾದಿ ಒತ್ತುವರಿ ಮಾಡದಂತೆ ದಾವೆ ಹಾಕಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿನ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿ ನನ್ನ ಸ್ವಂತ ಅಣ್ಣ ಎಂದರೆ ಸರಿ. ಸರ್ವೆ ನಂ.14 ಮೂಲತಃ ಸರ್ಕಾರಿ ಗೋಮಾಳ ಎಂದರೆ ಸರಿ. ನೂರಾರು ಎಕರೆ ಸರ್ಕಾರಿ ಜಮೀನು ಆಗಿತ್ತು ಎಂದರೆ ಸರಿ. ಸದರಿ ಸರ್ವೆ ನಂಬರ್ ನಲ್ಲಿ ಸುಮಾರು ಜನ ಸಾಗುವಳಿ ಮಾಡುತ್ತಾ ಬಂದಿದ್ದಾರೆಂದರೆ ಸರಿ. ನಾನು ಮತ್ತು ಪ್ರತಿವಾದಿ ಸಹ ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದು, ಸದರಿ ಜಮೀನನ್ನು ನಮಗೆ ನೀಡುವಂತೆ ಅರ್ಜಿ ಸಲ್ಲಿಸಿದ್ದೆವು ಎಂದರೆ ಸರಿ. ಅನುಭವದ ಆಧಾರದ ಮೇರೆಗೆ ಸಂಬಂಧಪಟ್ಟ ಅಧಿಕಾರಿಗಳು ನಮಗೆ ನಮ್ಮ ಸ್ವಾಧೀನದಲ್ಲಿದ್ದ ಜಮೀನನ್ನು ಮಂಜೂರು ಮಾಡಿದ್ದಾರೆಂದರೆ ಸರಿ.

ಸರ್ವೆ ನಂ.14 ರಲ್ಲಿ ನನಗೆ ಮತ್ತು ಪ್ರತಿವಾದಿಗೆ ಪ್ರತ್ಯೇಕವಾಗಿ 1 ಎಕರೆ 35 ಗುಂಟೆ ಮಂಜೂರಾಗಿದೆ ಎಂದರೆ ಸರಿ. ನಿಪಿ-1 ರಂತೆ ನನಗೆ ಮಂಜೂರಾದ ಜಮೀನಿನ ಪೂರ್ವಕ್ಕೆ ಸರ್ವೆ ನಂ.14 ರ ಜಮೀನು, ಪಶ್ಚಿಮಕ್ಕೆ ಬ್ಲಾಕ್ ನಂ.1 ಎ, ಉತ್ತರಕ್ಕೆ ಬ್ಲಾಕ್ ನಂ.3 ಎ ಮತ್ತು ದಕ್ಷಿಣಕ್ಕೆ ಸರ್ವೆ ನಂ.14 ರ ಜಮೀನು ಎಂದರೆ ಸರಿ.

ನನ್ನ ವಾದ ಪ್ರಮಾಣ ಪತ್ರದಲ್ಲಿ ಸರ್ವೆ ನಂ.242 ಹಳೆಯ ನಂಬರ್ 14 ರ ಪೂರ್ವಕ್ಕೆ ಸರ್ಕಾರಿ ಜಾಗ, ಪಶ್ಚಿಮಕ್ಕೆ ಪ್ರತಿವಾದಿಯ ಜಮೀನು, ಉತ್ತರಕ್ಕೆ

ಕಾಂಡೀನಾಯ್ಕನ ಜಮೀನು ಮತ್ತು ದಕ್ಷಿಣಕ್ಕೆ ಸರ್ಕಾರಿ ಜಮೀನು ಎಂದು ತೋರಿಸಿರುತ್ತೇವೆಂದರೆ ಸರಿ. ನಿಪಿ-1 ರಲ್ಲಿನ ಚಕ್ಕುಬಂದಿಗೂ ಹಾಗೂ ವಾದ ಪ್ರಮಾಣ ಪತ್ರದಲ್ಲಿನ ದಾವಾ ಸ್ವತ್ತಿನ ಚಕ್ಕುಬಂದಿಗೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನಿನ ಚಕ್ಕುಬಂದಿಯನ್ನು ತೋರಿಸಿ ದಾವೆ ಹಾಕಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ನನ್ನ ಸ್ವಾಧೀನಕ್ಕೆ ಯಾವತ್ತು ತೊಂದರೆ ಕೊಟ್ಟಿಲ್ಲ, ಅವರಿಗೆ ಮಂಜೂರಾದ ಜಮೀನಿನ ಸಾಗುವಳಿ ಮಾಡುತ್ತಾ ಬಂದಿದ್ದಾರೆಂದರೆ ಸಾಕ್ಷಿ ಅವರ ಜಮೀನಿನ ಸಾಗುವಳಿ ಮಾಡುತ್ತಿದ್ದಾರೆ, ಆದರೆ ನನ್ನ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆಂದು ನುಡಿಯುತ್ತಾರೆ.

ಮಂಜೂರಾದ ಜಮೀನುಗಳಲ್ಲಿ ಸ್ವಲ್ಪ ಜಾಗ ಉಳುಮೆ ಮಾಡಲು ಯೋಗ್ಯವಾಗಿದೆ, ಸ್ವಲ್ಪ ಜಾಗ ಉಳುಮೆಗೆ ಯೋಗ್ಯವಿಲ್ಲ ಎಂದರೆ ಸರಿ. ಸರ್ವೆ ನಂ.14 ಒಟ್ಟು 17 ಜನರಿಗೆ ಜಮೀನು ಮಂಜೂರಾಗಿದೆ ಎಂದರೆ ಸರಿ. ಮಂಜೂರಾತಿ ಸಮಯದಲ್ಲಿ ಯಾವುದೇ ಪೋಡಿಯಾಗಿಲ್ಲ ಎಂದರೆ ಸರಿ. ನಿಪಿ-1 ರಲ್ಲಿ ತೋರಿಸಿದ ಚಕ್ಕುಬಂದಿಯಂತೆ ಮಂಜೂರಾತಿಯನ್ನು ನೀಡಲಾಯಿತು ಎಂದರೆ ಸರಿ. ಸರ್ವೆ ನಂ.14 ರ ಜಮೀನು blue print ಆಗಿರುವ ಕಾರಣ ಯಾವುದೇ ಸರ್ವೆ ಆಗಿರಲಿಲ್ಲ ಎಂದರೆ ಸಾಕ್ಷಿ ಹೌದು ಆಗಿರಲಿಲ್ಲ, ಆದರೆ ಈಗ ಸರ್ವೆಯಾಗಿದೆ ಎಂದು ನುಡಿಯುತ್ತಾರೆ.

2004 ರಲ್ಲಿ ನನಗೆ ದಾವಾ ಸ್ವತ್ತು ಮಂಜೂರಾಗಿದೆ. 2009 ರವರೆಗೆ ನನ್ನ ಹೆಸರಿಗೆ ಖಾತೆ ಪಹಣಿ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನೇ ಪ್ರತಿವಾದಿಯ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಿಸುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ ಒತ್ತುವರಿ ಮಾಡದಂತೆ ತಿಳಿಸಿದಾಗ ನಾನು ಸದರಿ ದಾವೆ ಹಾಕಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ಸ್ವಾಧೀನಕ್ಕೆ ಯಾವತ್ತು ತೊಂದರೆ ಕೊಡದಿದ್ದರೂ, ಅವರ ಜಮೀನನ್ನು ಒತ್ತುವರಿ ಮಾಡಲು ಸುಳ್ಳು ದಾವೆ ಹಾಕಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ